# ಗಂಗಪಾಣಿ: ಮುರಿದುಬಿದ್ದ ಕೊಳಲು

ಕಥೆಗಾರರಾಗಿ ಪ್ರಸಿದ್ಧರಾದ ಎಸ್. ಗಂಗಾಧರಯ್ಯ ಅವರ ಚೊಚ್ಚಿಲ ಕಾದಂಬರಿ 'ಗಂಗಪಾಣಿ'. ಈ ಕಾದಂಬರಿಯನ್ನು ಅವರ ಕಥನಗಾರಿಕೆಯ ಕುತೂಹಲಕರ ಬದಲಾವಣೆ, ತಿರುವಿನ ರೂಪದಲ್ಲಿ ಗಮನಿಸಬಹುದು.

ವರ್ತಮಾನದಲ್ಲಿ ಗಾಂಧಿ ಮತ್ತು ವಿನೋಬಾ ಆಶಯಗಳ ಪರೀಕ್ಷೆಯ ಹಂಬಲ 'ಗಂಗಪಾಣಿ' ಕಾದಂಬರಿಯನ್ನು ರೂಪಿಸಿದಂತಿದೆ. "ಗಾಂಧಿ, ಅಂಬೇಡ್ಕರ್, ಬುದ್ಧ, ಬಸವ, ಭಾವೆ ಎಂಬುದೊಂದು ವಿಚಾರಭಾವವೇ ಹೊರತು ಕೇವಲ ದೇಹವಲ್ಲ. ಅದೊಂದು ಸಾವೇ ಇಲ್ಲದ ಅರಿವಿನ ಹೊಳೆ" ಎನ್ನುವ ಪಾತ್ರವೊಂದರ ಮಾತು, ಈ ಕಾದಂಬರಿಯ ತಾತ್ವಿಕತೆಗೂ ಅನ್ವಯಿಸುವಂತಹದ್ದು.

ಕಥಾನಾಯಕ ಗದ್ದಿಗೆಪ್ಪನ ತಾತ ಮೇಲಜ್ಜ ಸ್ವಾತಂತ್ರ್ಯ ಹೋರಾಟಗಾರ. ಜೈಲು ಕಂಡವನು. ಅವನ ಮಗ ಸಣ್ಣೀರಪ್ಪ ಅಪ್ಪನ ಹಾದಿಯಲ್ಲಿ ನಡೆದವರು. ಗಾಂಧಿಯಿಂದ ತೆಂಗಿನ ಗಿಡ ಮುಟ್ಟಿಸಿತಂದ ಸಣ್ಣೀರಪ್ಪ, ಆ ಗಿಡವನ್ನು ನೆಟ್ಟು ಅದಕ್ಕೆ 'ಗಾಂಧಿಗಿಡ' ಎಂದು ಹೆಸರಿಸಿದವನು. ಸಣ್ಣೀರಪ್ಪನ ಮಗ ವಚ್ಚಾಲಯ್ಯನಿಗೆ ಸ್ಪಷ್ಟ ತಾತ್ವಿಕತೆಯಿಲ್ಲದೆ ಹೋದರೂ, ಯಾರಿಗೂ ಕೇಡೆಣಿಸುವವನಲ್ಲ. ವಚ್ಚಾಲಯ್ಯನ ಮಗ ಗದಿಗೆಪ್ಪ ಅಪ್ಪಟ ಗಾಂಧಿಪ್ರೇಮಿ. ಮಗನಿಗೆ ಗಾಂಧಿಯೆಂದು ಹೆಸರಿಟ್ಟವನು. 'ಗಾಂಧಿಗಿಡ'ದ ಕಾಯಿಗಳನ್ನು ಸಸಿ ಮಾಡಿ 'ಗಾಂಧಿ ತೋಟ' ನಿರ್ಮಿಸಬೇಕೆಂದು ಆಸೆಪಟ್ಟವನು. ಹೀಗೆ ತಲೆಮಾರುಗಳಿಂದ ತಲೆಮಾರಿಗೆ ಗಾಂಧಿಪ್ರೀತಿ ಬಿತ್ತರಗೊಳ್ಳುವುದು ಹಾಗೂ ಆ ಪ್ರೀತಿ ವರ್ತಮಾನದಲ್ಲಿ ಪರೀಕ್ಷೆಗೊಳಗಾಗುವುದನ್ನು ಕಾದಂಬರಿ ಚಿತ್ರಿಸುತ್ತದೆ. 'ಗಂಗಪಾಣಿ' ಗಿಡದ ಕಾಯಿಗಳನ್ನು ಸಸಿ ಮಾಡಿ ತೋಟ ಮಾಡುವ ಗದಿಗೆಪ್ಪನ ಕನಸು ಈ ಸಮಾಜದ ಸಂರಚನೆಯಲ್ಲಿ ಪ್ರಕಟಗೊಳ್ಳಬೇಕಿತ್ತಲ್ಲವೆ ಎನ್ನುವ ಪ್ರಶ್ನೆಯನ್ನು ಕೃತಿ ನಮ್ಮ ಮುಂದಿಡುತ್ತದೆ.

ಗಾಂಧಿ ಮತ್ತು ವಿನೋಬಾ ಕಾದಂಬರಿಯಲ್ಲಿ ಎಲ್ಲಿಯೂ ನೇರವಾಗಿ ಕಾಣಿಸಿಕೊಳ್ಳುವುದಿಲ್ಲ. ಅವರನ್ನು ವ್ಯಕ್ತಿಗಳ ರೂಪದಲ್ಲಿ ಚಿತ್ರಿಸುವುದೂ ಕಾದಂಬರಿಯ ಉದ್ದೇಶ ಅಲ್ಲ. ಒಳಿತಿನ ಸಂಕೇತವಾಗಿ, ಮಾನವೀಯತೆಯ ಸಂಕೇತವಾಗಿ, ಸಮಾಜದ ಆರೋಗ್ಯದ ರೂಪಕಗಳಾಗಿ ಗಾಂಧಿ-ವಿನೋಬಾ ಈ ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತಾರೆ.

'ಗಂಗಪಾಣಿ' ಕಾದಂಬರಿಯ ಮತ್ತೊಂದು ವಿಶೇಷ ಅದು ಒಳಗೊಂಡಿರುವ ತಾತ್ವಿಕತೆಗೆ ಸಂಬಂಧಿಸಿದ್ದು. ಜನಸಾಮಾನ್ಯರ ಬದುಕಿನೊಳಗೆ ಅತ್ಯಂತ ಸಹಜವಾಗಿ ಬೆರೆತುಹೋಗಿರುವ ತಾತ್ವಿಕತೆಯದು. ಈ ತಾತ್ವಿಕತೆ ತತ್ವಪದಗಳ ರೂಪದಲ್ಲಿ, ವಚನಗಳ ರೂಪದಲ್ಲಿ ಕಾದಂಬರಿಯಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ. ಅಲ್ಲಮಪ್ರಭು, ಬಸವಣ್ಣ, ಶಿಶುನಾಳ ಶರೀಫ, ಅಕ್ಕಮಹಾದೇವಿ, ಮುಪ್ಪಿನ ಷಡಕ್ಷರಿ, ಶಿವಯೋಗಿ – ಹೀಗೆ ಹಲವು ದಾರ್ಶನಿಕರು ಈ ಕಾದಂಬರಿಯ ಭಾಗವಾಗಿದ್ದಾರೆ. ಪ್ರಕೃತಿಯ ಸಂಗೀತ, ಇನ್ನೊಂದೆಡೆ ತತ್ವಪದಗಳ ಆಲಾಪ – ಈ ಅಪೂರ್ವ ಜುಗಲಬಂದಿ ಕಾದಂಬರಿಗೆ ವಿಶೇಷ ಆವರಣವನ್ನು ಸೃಷ್ಟಿಸಿದೆ. ಕಥಾನಾಯಕ ಹಾಡುವ ರಚನೆಗಳು ಅವನ ವ್ಯಕ್ತಿತ್ವದ ಚಿತ್ರಣದಂತೆಯೂ, ಅವನ ಬದುಕಿನ ಏರುಪೇರುಗಳ ಸಂಕೇತಗಳಂತೆಯೂ ಕಾಣಿಸುತ್ತವೆ.

ಕಥಾನಾಯಕ ಗದಿಗೆಪ್ಪನ ಅಲೆದಾಟ ಕಾದಂಬರಿಯ ವಸ್ತು. ಸುಮಾರು ಇಪ್ಪತ್ತು ವರ್ಷಗಳ ಕಾಲ ಗೊತ್ತುಗುರಿಯಿಲ್ಲದೆ ತಿರುಗುತ್ತಾನೆ. ಈ ತಿರುಗಾಟದಲ್ಲಿ ಹಲವು ಜನರನ್ನು ಭೇಟಿಯಾಗಿ, ಜೀವನದ ಹಲವು ಮುಖಗಳ ಅನುಭವವಾಗಿ, ಕೊನೆಗೆ ತನ್ನೂರಿನಲ್ಲೇ ಏನನ್ನಾದರೂ ಮಾಡಬೇಕೆನ್ನುವ ಅರಿವಿನಿಂದ ಹಿಂತಿರುಗುತ್ತಾನೆ. "ಚಿಗುರಲಾರದ, ಹಸಿರಾಗಲಾರದ, ಹೂ ಅರಳಿಸಲಾಗದ ಈ ನರಮನುಷ್ಯನ ಬದುಕು ಅದೇಟು ಸ್ವಾರ್ಥದಿಂದ ಕೂಡಿದೆ. ಕೇಡು ತುಂಬಿಕೊಂಡಿದೆ. ಇವೆಲ್ಲವುಗಳಿಂದ ಮುಕ್ತಿ